ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ: ಕಾಶಿಇ 174 ನ್ಯಾಕ್‌ನಿಯೋಜನೆ 2016-17 ವ&ನಿ

ಕಾಲೇಜು ಶಿಕ್ಷಣ ಆಯುಕ್ತರಕಛೇರಿ,
ಬೆಂಗಳೂರು, ದಿನಾಂಕ:24-11-2017.

**ಆದೇಶ**

ವಿಷಯ: ನ್ಯಾಕ್ ಮಾನ್ಯತೆಗೆ ಒಳಪಡುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಒದಗಿಸುವ ಬಗ್ಗೆ.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ:06-02-2017.

*****

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ನ್ಯಾಕ್ ಪರಿವೀಕ್ಷಣಾ ಅವಧಿಯಲ್ಲಿ ಕಾರ್ಯಭಾರ ನಿರ್ವಹಿಸಲು ಉಪನ್ಯಾಸಕರನ್ನು ಅಥವಾ ಕಛೇರಿ ಕಾರ್ಯ ನಿರ್ವಹಿಸಲು ಆಡಳಿತ ಸಿಬ್ಬಂದಿಗಳನ್ನು ಕೋರಿ ನ್ಯಾಕ್ ಮಾನ್ಯತೆಗೊಳಪಡುತ್ತಿರುವ ಕಾಲೇಜುಗಳಿಂದ ಸ್ವೀಕರಿಸುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹತ್ತಿರದ ಕಾಲೇಜುಗಳಿಂದ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಸದರಿ ಅವಧಿಗೆ ಮಾತ್ರ ನಿಯೋಜಿಸಲು ತಮ್ಮ ಹಂತದಲ್ಲಿಯೇ ಕ್ರಮಕೈಗೊಂಡು ಈ ಕಛೇರಿಗೆ ಮಾಹಿತಿ ನೀಡಲು ಈಗಾಗಲೇ ಸೂಚಿಸಲಾಗಿರುತ್ತದೆ. ಆದಾಗ್ಯೂ ಹಲವಾರು ಕಾಲೇಜುಗಳ ಪ್ರಾಂಶುಪಾಲರುಗಳು ಈ ಸಂಬಂಧ ಕೇಂದ್ರ ಕಛೇರಿಗೆ ಪ್ರಸ್ತಾವನೆಗಳನ್ನು ಕಳುಹಿಸುತ್ತಿದ್ದು, ರಾಜ್ಯ ಗುಣಮಟ್ಟ ಭರವಸಾ ಕೋಶದ ಸಮನ್ವಯಾಧಿಕಾರಿಗಳು ಸಹ ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದು, ಮೇಲ್ಕಂಡಂತೆ ಪ್ರಸ್ತಾವನೆಗಳು ಸ್ವೀಕೃತವಾಗುತ್ತಿರುವುದರಿಂದ ನಿಯೋಜನೆ ಪ್ರಕ್ರಿಯೆ ಅಗತ್ಯತೆ ಅನುಸಾರ ಆಗದೇ ಇರುವ ಸಾಧ್ಯತೆಗಳು ಇರುವುದರಿಂದ ನ್ಯಾಕ್ ಪ್ರಕ್ರಿಯೆಗೆ ಒಳಪಡುತ್ತಿರುವ ಕಾಲೇಜುಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ ನ್ಯಾಕ್ ಅವಧಿಗೆ ಮಾತ್ರ ಸೀಮಿತಗೊಳಿಸಿ ನಿಯೋಜನೆಗಳನ್ನು ಮಾಡಲು ಹಾಗೂ ಈ ಕಛೇರಿಗೆ ವರದಿ ನೀಡುವಂತೆ ಮತ್ತು ನ್ಯಾಕ್ ಸಂಬಂಧ ನಿಯೋಜನೆಗಳನ್ನು ಹೊರತುಪಡಿಸಿ ಇತರೆ ಯಾವುದೇ ನಿಯೋಜನೆಯನ್ನು ಮಾಡಬಾರದು ಎಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ.

*(ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)*

Shilpa

ಕಾಲೇಜು ಶಿಕ್ಷಣ ಮುಖ್ಯ ಆಡಳಿತಾಧಿಕಾರಿಗಳು

**ಪ್ರತಿ**

1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಕಛೇರಿ, ಬೆಂಗಳೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಮೈಸೂರು/ಕಲಬುರಗಿ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಅಗತ್ಯ ಕ್ರಮಕ್ಕಾಗಿ (ನ್ಯಾಕ್ ಮಾನ್ಯತೆಗೊಳಪಡುತ್ತಿರುವ ಕಾಲೇಜುಗಳಿಗೆ ಸಿಬ್ಬಂದಿಗಳ ಅವಶ್ಯಕತೆಯಿದ್ದಲ್ಲಿ ಸಂಬಂಧಿಸಿದ ಪ್ರಾದೇಶಿಕ ಜಂಟಿ ನಿರ್ದೇಶಕರನ್ನು ಸಂಪರ್ಕಿಸುವಂತೆ ಸೂಚಿಸಲಾಗಿದೆ ಮತ್ತು ಈ ಸಂಬಂಧ ಕೇಂದ್ರ ಕಛೇರಿಗೆ ಯಾವುದೇ ಪ್ರಸ್ತಾವನೆಗಳನ್ನು ಸಲ್ಲಿಸದಿರುವಂತೆ ಸೂಚಿಸಿದೆ ಹಾಗೂ ನ್ಯಾಕ್ ಅವಧಿ ಮುಗಿದ ತಕ್ಷಣ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳನ್ನು ಕರ್ತವ್ಯದಿಂದ ಬಿಡುಗಡೆಗೊಳಿಸಿ ಮೂಲ ಕಾಲೇಜಿನಲ್ಲಿ ಕರ್ತವ್ಯ ಹಾಜರಾಗಲು ಸೂಚಿಸುವುದು)
3. ಮ್ಯಾನೇಜರ್, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಅಗತ್ಯ ಕ್ರಮಕ್ಕಾಗಿ. (ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
4. ಸಮನ್ವಯಾಧಿಕಾರಿಗಳು, ನ್ಯಾಕ್ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಮಾಹಿತಿಗಾಗಿ.
5. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳ ಆಪ್ತ ಸಹಾಯಕರುಗಳಿಗೆ-ಮಾಹಿತಿಗಾಗಿ.
6. ಕಛೇರಿ ಪ್ರತಿ.

*DCE 171 NAC Order (Nmurthy)*